**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.365/2023**

**PW-2 CW-7**

| | | |
|---|---|---|
| ಸಾಕ್ಷಿದಾರನ ಹೆಸರು | : | ಟಿ. ರಾಮಣ್ಣ ತಂದೆ ತಿಪ್ಪಣ್ಣ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ನಿವೃತ್ತ ಪಿಎಸ್ ಐ |
| ವಾಸಸ್ಥಳ | : | ಬಳ್ಳಾರಿ |
| ಪ್ರಮಾಣೀಕರಿಸಿದ ದಿನಾಂಕ | : | 28-03-2025 |

---

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನಾನು ದಿನಾಂಕ 18-06-2017 ರಿಂದ 30-06-2018 ರ ವರೆಗೆ ಗಬ್ಬೂರು ಪೊಲೀಸ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ **13-05-2018** ರಂದು ನಾನು ಬೆಳಿಗ್ಗೆ **11-00** ಗಂಟೆಯ ಸುಮಾರಿಗೆ ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ**-1** ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಆಧಾರದ ಮೇಲೆ ಠಾಣಾ ಗುನ್ನಾ ನಂಬರ **148/2018** ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇಧಿಸಿಕೊಂಡಿರುತ್ತೇನೆ**.** ನಂತರ ಅದೇದಿನ ಮಧ್ಯಾಹ್ನ **2-00** ರಿಂದ **3-00** ಗಂಟೆಗೆ ಚಾಸಾ**-1** ರವರು ತೋರಿಸಿದ ಸ್ಥಳದಲ್ಲಿ ಚಾಸಾ**-2** ಮತ್ತು **3** ಪಂಚರ ಸಮಕ್ಷಮ ಪಂಚನಾಮೆ ಮಾಡಿ ಸಹಿ ಪಡೆದಿರುತ್ತೇನೆ**.** ಅದೇದಿನ ಚಾಸಾ**-4** ರಿಂದ **6** ರವರ ಹೇಳಿಕೆ ಪಡೆದಿರುತ್ತೇನೆ**.** ನಂತರ ಅದೇ ದಿನ ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿರುತ್ತೇನೆ**.** ದಿನಾಂಕ **30-05-2018** ರಂದು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ**.**

ನಿಪಿ**-1** ರ ಮೇಲಿರುವ ಸಹಿಯನ್ನು ನಿಪಿ**-1(**ಬಿ**)** ಎಂದು ಗುರುತಿಸಲಾಯಿತು**.** ಪಂಚನಾಮೆಯನ್ನು ನಿಪಿ**-2** ಎಂದು**,** ಸಾಕ್ಷಿಯ ಸಹಿಯನ್ನು ನಿಪಿ**-2(**ಎ**)** ಎಂದು ಗುರುತಿಸಲಾಯಿತು**.** ಪ್ರಥಮ ವರ್ತಮಾನ ವರದಿಯನ್ನು ನಿಪಿ**-3** ಎಂದು**,** ಸಾಕ್ಷಿಯ ಸಹಿಯನ್ನು ನಿಪಿ**-3(**ಎ**)** ಎಂದು ಗುರುತಿಸಲಾಯಿತು**.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಮ್.ಆರ್ ವಕೀಲರಿಂದ.**

ಚಾಸಾ-1 ರವರು ಟೈಪ್ ಮಾಡಿದ ದೂರನ್ನು ಅವರೇ ತೆಗೆದುಕೊಂಡು ಬಂದಿರುತ್ತಾರೆ. ಚಾಸಾ-1 ರವರು ಅಂದಾಜು ಅರ್ಧ ಗಂಟೆಯವರೆಗೆ ಠಾಣೆಯಲ್ಲಿದ್ದರು. ಚಾಸಾ-1 ರವರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ಚಾಸಾ-1 ರವರೊಂದಿಗೆ 2-3 ಜನರು ಬಂದಿದ್ದರು ಆದರೆ ಅವರ ಹೆಸರು

ಹೇಳಲು ಬರುವುದಿಲ್ಲ. ಚಾಸಾ-1 ರವರೊಂದಿಗೆ ಒರ್ವ ಹೆಣ್ಣು ಮಗಳು ಮತ್ತು ಇಬ್ಬರು ಗಂಡು ಮಕ್ಕಳು ಇದ್ದರು. ಮಸರಕಲ್ ಗ್ರಾಮದಲ್ಲಿ ವಾರ್ಡಗಳು ಇವೆ ಎಂದರೆ ಸರಿ. ಘಟನಾ ಸ್ಥಳ ಯಾವ ವಾರ್ಡನಲ್ಲಿ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ರಸ್ತೆಯ ಮೇಲೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆ ಯಾವ ವಾರ್ಡಿನಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಚಾಸಾ-4 ರಿಂದ 6 ರವರು ಚಾಸಾ-1 ರವರ ಮನೆಯವರಾಗಿರುತ್ತಾರೆ ಎಂದರೆ ಸಾಕ್ಷಿ ಸಂಬಂಧಿಕರಾಗಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-1 ರವರ ಸಂಬಂಧಿಕರನ್ನು ಹೊರತುಪಡಿಸಿ ಬೇರೆಯವರ ಹೇಳಿಕೆ ಪಡೆದಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲಾ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ದೂರು ನೀಡಲು ಆದ ವಿಳಂಬವನ್ನು ನಮೂದಿಸಿಲ್ಲ. ಘಟನಾ ಸ್ಥಳದ ಸುತ್ತಮುತ್ತ ಮನೆಗಳು ಇವೆ ಎಂದರೆ ಸರಿ. ಸದರಿ ಮನೆಗಳಲ್ಲಿ ಜನ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಪಂಚನಾಮೆಯ ಕಾಲಕ್ಕೆ ಘಟನಾ ಸ್ಥಳದ ಇರುವ ಅಕ್ಕಪಕ್ಕದ ಮನೆಯವರು ಯಾರು ಬಂದಿರಲಿಲ್ಲ. 1 ಮತ್ತು 2 ನೇ ಆರೋಪಿತರು ಕುರಿ ಕಾಯುವ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಮಾಡುತ್ತಿರಬಹುದು ಎಂದು ನುಡಿಯುತ್ತಾರೆ. ಆರೋಪಿತರಿಗೆ ಸೇರಿದ ಒಂದು ಕುರಿಯನ್ನು ಚಾಸಾ-1 ರವರ ಸಂಬಂಧಿಕರು ಸಾಯಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕುರಿಯ ಬೆಲೆಯನ್ನು ನೀಡುವಂತೆ ಆರೋಪಿತರು ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರಿಗೆ ಸದರಿ ಹಣವನ್ನು ನೀಡಬಾರದು ಎನ್ನುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.